# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ಗುರುತಿನ ಪ್ರಶ್ನೆ

ದಿನಾಂಕ : 10-03-2021 ಪ್ರಶ್ನೆ ಸಂಖ್ಯೆ : 144 (883)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು )

ಉತ್ತರ ನೀಡಬೇಕಾದ ದಿನಾಂಕ : 10-03-2021

ಉತ್ತರಿಸುವ ಸಚಿವರು: ಕಂದಾಯ ಸಚಿವರು

ವಿಷಯ : ಕಲಬುರಗಿ ಜಿಲ್ಲೆ ಶಹಾಬಾದ ತಾಲ್ಲೂಕಿನ ಭಂಕೂರು ಗ್ರಾಮಕ್ಕೆ ರುದ್ರಭೂಮಿ ಕುರಿತು

(ಅ) ಕಲಬುರ್ಗಿ ಜಿಲ್ಲೆ ಶಹಾಬಾದ ತಾಲ್ಲೂಕಿನ ಭಂಕೂರು ಗ್ರಾಮ ಸುಮಾರು 20 ಸಾವಿರ ಜನಸಂಖ್ಯೆ ಹೊಂದಿದ್ದು ನೂರಾರು ವರ್ಷಗಳಿಂದ 0.33 ಗುಂಟೆ ಜಾಗದಲ್ಲಿ ಮೃತದೇಹಗಳ ಶವಸಂಸ್ಕಾರ ಮಾಡುತ್ತಿರುವುದು ನಿಜವೇ;

(ಆ) ಹೆಚ್ಚುತ್ತಿರುವ ಜನಸಂಖ್ಯೆಯ ಕಾರಣದಿಂದ ಶವಸಂಸ್ಕಾರಕ್ಕೆ ಭೂಮಿಯನ್ನು ಅಗೇದಾಗ ಈಗಾಗಲೇ ಶವ ಸಂಸ್ಕಾರ ಮಾಡಿದ ಶವಗಳ ಅವಶೇಷಗಳು ಸಿಗುತ್ತಿರುವುದು ನಿಜವೇ;

(ಇ) ಗ್ರಾಮದ ಜನರು ಶವ ಸಂಸ್ಕಾರಕ್ಕೆ ಜಾಗ ಇಲ್ಲದ ಕಾರಣಕ್ಕೆ ಆಸ್ಪತ್ರೆ/ವ್ಯದ್ಯಕೀಯ ಕಾಲೇಜುಗಳಿಗೆ ದೇಹ ದಾನ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಸರ್ವೆ ನಂ 115ರಲ್ಲಿ 23.33 ಎಕರೆ ಭೂಮಿ ಖಾಲಿ ಇದ್ದು ಇಲ್ಲಿ ಸವಳು ಮಣ್ಣು ಇರುವ ಕಾರಣ ಶವ ಸಂಸ್ಕಾರಕ್ಕೆ ಅಡ್ಡಿ ಆಗುತ್ತಿದ್ದು; ಭಂಕೂರು ಗ್ರಾಮಕ್ಕೆ ರುದ್ರ ಭೂಮಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?